## ನಮ್ಮ ವರಿವರು

ನೋಡ ಬನ್ನಿ ನೋಡಬನ್ನಿ
ನಮ್ಮ ಜನರ
ಕಾಯಕದಿ ಕೈಲಾಸ ಕಂಡ
ನಮ್ಮ ಶ್ರಮಿಕರ
ಕೋವಿ ಹಿಡಿದು ಸೇವೆಗೈವ
ನಮ್ಮ ಧೀರರ
ದೇಶಕಾಗಿ ಜೀವವಿಡುವ
ವೀರ ಯೋಧರ
ಹೊಲವನು ಉತ್ತು ಬಿತ್ತಿ
ಹಸಿರಿನ ಕವಿತೆ ಬರೆಯುವವರ
ಜೀವಕೆ ಜೀವ ಕೊಡುವವರ
ನಮ್ಮ ಅನ್ನದಾತರ
ಬೀದಿ ಬೀದಿ ಸುತ್ತುವವರ
ವಣಿಕರಾಗಿ ಬಾಳುವವರ
ಕಣ್ಣೆನಲ್ಲೆ ಕಣ್ಣ ನೆಟ್ಟು
ಕುಶಲ ಕಲೆಯ ಉಳಿಸುವವರ
ಮುಗ್ಧ ಮನಕೆ ಜ್ಞಾನ ಹರಿಸಿ
ಮನುಜತನವ ಕಲಿಸುವವರ
ಮನೆಮನೆಯಲು ಜೀವ ತೇದು
ಮನೆಗೆ ಬೆಳಕ ಬೀರುವವರ
ಸ್ನೇಹ ಸಂಘ ಕಟ್ಟಿ ದುಡಿದು
ಎದೆಗೆ ಎದೆಯ ನೀಡುವವರ
ಕಿರಿಯರನ್ನು ತಿದ್ದಿ ತೀಡೋ
ಪಕ್ವ ಮನದ ಹಿರಿಯರ
ನೋಡ ಬನ್ನಿ ನೋಡ ಬನ್ನಿ
ನಮ್ಮ ಜನರನು
ಕಾಯಕದಿ ಕೈಲಾಸ ಕಾಣುವ
ನಮ್ಮ ಶ್ರಮಿಕರ





# ತಾಳಿದವನು ಬಾಳಿಯಾನು...!

■ ವಿ. ವಿಜಯೇಂದ್ರ ರಾವ್

ಒಮ್ಮೆ ಒಬ್ಬ ಟೀಚರ್ ತನ್ನ ಕ್ಲಾಸಿನ ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ಆಕರ್ಷಕ ಚಾಕೊಲೇಟ್ ಬಾರ್ ಕೊಟ್ಟು, ಇದನ್ನು ಹತ್ತು ನಿಮಿಷಗಳ ಕಾಲ ಯಾರೂ ತಿನ್ನಬಾರದು ಎಂದಷ್ಟೇ ಹೇಳಿ ತರಗತಿಯಿಂದ ಹೊರ ನಡೆದರು.

ಮಕ್ಕಳಿಗೆ ಬಾಯಲ್ಲಿ ನೀರು ತರಿಸುವ ರುಚಿಯಾದ ಚಾಕೊಲೇಟ್ ಕೈಯಲ್ಲಿ ಇಟ್ಟುಕೊಂಡು ಕೂರುವುದು ಬಹಳ ಕಷ್ಟವಾಗಿತ್ತು...! ಹತ್ತು ನಿಮಿಷದ ನಂತರ ಆ ಟೀಚರ್ ಮತ್ತೆ ಕ್ಲಾಸಿಗೆ ಬಂದು ನೋಡಿದಾಗ, ಅಷ್ಟು ಮಕ್ಕಳಲ್ಲಿ ಕೇವಲ ಏಳು ಮಕ್ಕಳಷ್ಟೇ ಕೈಯಲ್ಲಿ ಚಾಕೊಲೇಟ್ ಇಟ್ಕೊಂಡು ವಿಧೇಯದಿಂದ ಕುಳಿತಿದ್ದರು.ಮಕ್ಕಳಿಗೆ ಗೊತ್ತಾಗದಂತೆ ಆ ಏಳು ಮಕ್ಕಳ ಹೆಸರನ್ನು ತಮ್ಮ ಡೈರಿಯಲ್ಲಿ ಬರೆದುಕೊಂಡು, ನಂತರ ಸಹಜವಾಗಿ ಮತ್ತವರ ಕಡೆ ನೋಡಿದಾಗ, ಅವರುಗಳು ಆ ಚಾಕೊಲೇಟ್ ಬಣ್ಣ, ರುಚಿ, ತಮ್ಮ ಕೈಯಲ್ಲಿ ತಡೆಯಲಾಗದೆ ತಿಂದ ಬಗ್ಗೆ ಮಾತಾಡಿಕೊಳ್ಳುತ್ತಾ ಇದ್ದರು.

ಅದೇ ಟೀಚರ್ ತಮ್ಮ ನಿವೃತ್ತಿಯ ನಂತರ ಆ ಹಳೆಯ ಡೈರಿಯನ್ನು ತೆಗೆದು ನೋಡಿ, ಅಂದು ಬರೆದುಕೊಂಡಿದ್ದ ಆ ಏಳು ಮಕ್ಕಳ ಬಗ್ಗೆ ವಿಶೇಷ ಕಾಳಜಿಯಿಂದ ಕಷ್ಟ ಪಟ್ಟು ಮಾಹಿತಿಯನ್ನು ಸಂಗ್ರಹಿಸಿದಾಗ, ಆ ಏಳು ಮಕ್ಕಳು, ಇಂದು ತಮ್ಮ ತಮ್ಮ ಕ್ಷೇತ್ರದಲ್ಲಿ ಮೊದಲಿಗರಾಗಿ ಸತ್ಪ್ರಜೆಯಾಗಿ ಮಿಂಚುತ್ತಿದ್ದಾರೆ ಎಂದು ತಿಳಿದು ಸಂತೋಷ ಪಟ್ಟರು. ಹಾಗೆ ಉಳಿದವರ ಮಾಹಿತಿಯನ್ನು ಕೆದಕಿದಾಗ ಅವರಲ್ಲಿ ಬಹುತೇಕ ಮಂದಿ ಸಾಧಾರಣ ಜೀವನ ಸಾಗಿಸುತ್ತಾ ಕಾಲ ತಳ್ಳುತ್ತಿದ್ದಾರೆ ಅಂತ ತಿಳಿದು ಬರುವುದು ಅವರಿಗೆ. ಯಾರು ಜೀವನದಲ್ಲಿ ತಾಳ್ಮೆಯಿಂದ ಇರುತ್ತಾರೋ, ಅವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ. ಅವರು ಯಾವುದೇ ಸೋಲಿನಿಂದ ವಿಚಲಿತರಾಗದೆ,ಅದನ್ನು ವಿಶ್ಲೇಷಿಸಿ,ಅದನ್ನು ಗೆದ್ದು ಯಶಸ್ಸಿನತ್ತ ಸಾಗುವರು.!

ಆದ್ದರಿಂದ ಮಕ್ಕಳೇ, ಸಹನೆ, ತಾಳ್ಮೆ, ಗುರುಹಿರಿಯರ ಮಾತಿಗೆ ಮರ್ಯಾದೆ ಕೊಡುವುದು, ಮುಂತಾದವುಗಳನ್ನು ಯಾರು ಆಚರಿಸುತ್ತಾರೋ ಅವರ ಮುಂದಿನ ಜೀವನ ಹಸನಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ..! (ಕೇಳಿದ್ದು)